ಅಧ್ಯಕ್ಷರು: ಮಾನ್ಯ ಮಂತ್ರಿಗಳು ಎಲ್ಲವನ್ನೂ ಸರಿಪಡಿಸುತ್ತೇನೆ ಎಂದು ಹೇಳಿದ್ದಾರಲ್ಲಾ.

(ಗೊಂದಲ)

ಶ್ರೀ ಸಿ.ಬೈರೇಗೌಡ: ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಕೊಟ್ಟಿರುವ ಉತ್ತರ ಸಮರ್ಪಕವಾಗಿಲ್ಲ. ವಿಧಾನಸಭಾ ಕ್ಷೇತ್ರವಾರು ಮಾಹಿತಿ ಕೊಟ್ಟಿಲ್ಲ. ಉತ್ತರವನ್ನು ತಡೆಹಿಡಿದು ನಮಗೆ ಬೇರೆ ಉತ್ತರ ಕೊಡಿಸಿ.

(ಗೊಂದಲ)

ಅಧ್ಯಕ್ಷರು: ಅಂತಿಮವಾಗಿ ನಾನು ಈ ಪ್ರಶ್ನೆಯನ್ನು ತಡೆಹಿಡಿದಿದ್ದೇನೆ. ಇದರ ಬಗ್ಗೆ ಬೇರೆ ಉತ್ತರ ಕೊಡಿ. ಇನ್ನೊಂದು ದಿನ ಇದನ್ನು ತೆಗೆದುಕೊಳ್ಳೋಣ. ಶನಿವಾರದೊಳಗೆ ಉತ್ತರ ಕಳುಹಿಸಿಕೊಡಿ.

ಕುಮಟಾ, ಹೊನ್ನಾವರ ಪಟ್ಟಣ ಹಾಗೂ ಗೋಕರ್ಣಕ್ಕೆ ಒಳಚರಂಡಿ ವ್ಯವಸ್ಥೆ ಒದಗಿಸುವುದು.

342(2061)

ಶ್ರೀ ಮೋಹನ್ ಕೆ.ಶೆಟ್ಟಿ(ಕುಮಟಾ): ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಕುಮಟಾ, ಹೊನ್ನಾವರ ಪಟ್ಟಣ ಹಾಗೂ ಗೋಕರ್ಣಕ್ಕೆ ಒಳಚರಂಡಿ ವ್ಯವಸ್ಥೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ ಮತ್ತು ಕೆಲಸ ಎಂದಿನಿಂದ ಪ್ರಾರಂಭಿಸಲಾಗುವುದು.

ಶ್ರೀ ಎಸ್.ಎಂ.ಕೃಷ್ಣ: (ಮುಖ್ಯ ಮಂತ್ರಿಯವರು):

1. ಬಂದಿದೆ. ಕುಮಟಾ ಮತ್ತು ಹೊನ್ನಾವರ ಪಟ್ಟಣಗಳಿಗೆ ಒಳಚರಂಡಿ ಯೋಜನೆ ತಯಾರಿಸಲು ಸರ್ವೆ ಕೆಲಸವನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯು ಕೈಗೆತ್ತಿಕೊಳ್ಳಲಿದೆ.

ಮಂಡಲಿಯಿಂದ ಪ್ರಸ್ತಾವನೆ ಸರ್ಕಾರಕ್ಕೆ ಬಂದ ನಂತರ ಪರಿಶೀಲಿಸಲಾಗುವುದು.

ಗೋಕರ್ಣ ಪಟ್ಟಣವು ನಗರ ಸ್ಥಳೀಯ ಸಂಸ್ಥೆಯಲ್ಲ. ಆದುದರಿಂದ ಅದು ನಗರಾಭಿವೃದ್ಧಿ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುವುದಿಲ್ಲ.

ಶ್ರೀ ಮೋಹನ್ ಕೆ.ಶೆಟ್ಟಿ: ಮಾನ್ಯ ಅಧ್ಯಕ್ಷರೇ, ಕುಮಟಾ, ಹೊನ್ನಾವರ ಪಟ್ಟಣ ಹಾಗೂ ಗೋಕರ್ಣಕ್ಕೆ ಒಳಚರಂಡಿ ವ್ಯವಸ್ಥೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ನಮ್ಮ ದೇಶಕ್ಕೆ ಸ್ವಾತಂತ್ರ ಬಂದು ಈಗಾಗಲೇ 52 ವರ್ಷಗಳಾಯಿತು. ಆದರೂ ಕೂಡ ನಮ್ಮ ಕುಮಟಾ ಕ್ಷೇತ್ರ ಇನ್ನೂ ಮೂಲಭೂತ ಸೌಲಭ್ಯಗಳಿಂದ ವಂಚಿತವಾಗಿದೆ. ಆದರೆ ಇಲ್ಲಿಯ ಪ್ರಕೃತಿದತ್ತ ಸೌಂದರ್ಯ ಮತ್ತು ನೈಸರ್ಗಿಕ ಸಂಪತ್ತಿನಿಂದಾಗಿ ಕುಮಟಾ, ಹೊನ್ನಾವರ ಮತ್ತು ಗೋಕರ್ಣಗಳು ಪ್ರಸಿದ್ಧಿಯನ್ನು ಗಳಿಸಿವೆ. ನೈಸರ್ಗಿಕ ಸಂಪತ್ತುಳ್ಳ, ದೇವರು ಕೊಟ್ಟ ನಮ್ಮ ಕ್ಷೇತ್ರ ಬಹಳ ಮಹತ್ವಪೂರ್ಣವಾದುದು. ಕುಮಟಾ, ಗೋಕರ್ಣ ಮತ್ತು ಹೊನ್ನಾವರ ಇಂತಹ ಪ್ರದೇಶಗಳುಳ್ಳ ಕ್ಷೇತ್ರ ಇದು. ಗೋವಾಕ್ಕೆ ಹೋಗುವವರು, ಮಹಾರಾಷ್ಟ್ರಕ್ಕೆ ಹೋಗುವವರು, ಮತ್ತು ಸೌತ್ ಕೆನರಾ, ಕೇರಳ, ಕೊಚ್ಚಿನ್, ಪವಿತ್ರ ಸ್ಥಳವಾದ ಧರ್ಮಸ್ಥಳ, ಮುರಡೇಶ್ವರ, ಮತ್ತು ಇಡಗುಂಜಿಗೆ ಬರುವವರು ನಮ್ಮ ಕ್ಷೇತ್ರದ ಮೇಲಿನಿಂದ ಹೋಗುತ್ತಿದ್ದಾರೆ. ಅಲ್ಲಿ ತುಂಬ ದುರ್ವಾಸನೆ ಬರುತ್ತಿದೆ. ದೇಶ ವಿದೇಶಗಳಿಂದ ಜನ ಸಾವಿರಾರು ಸಂಖ್ಯೆಯಲ್ಲಿ ಬರುತ್ತಿದ್ದಾರೆ. ನುಸಿಗಳ ಕಾಟದಿಂದ ಯಾವ ನಾಗರೀಕರೂ ಕೂಡ ನಾಲ್ಕು ಗಂಟೆ ಮೇಲೆ ನಿದ್ರೆ ಮಾಡುವುದಕ್ಕೆ ಆಗದೆ ಇರುವ ಪರಿಸ್ಥಿತಿ ಇದೆ. ಮಾನ್ಯ ಸಚಿವರು ಸರ್ವೇ ಕಾರ್ಯ ಕೈಗೆತ್ತಿಕೊಳ್ಳಲಾಗುವುದು ಎಂದು ಉತ್ತರ ಕೊಟ್ಟಿದ್ದಾರೆ. ಯಾವಾಗ ಅದನ್ನು ಕೈಗೆತ್ತಿಕೊಳ್ಳುತ್ತಾರೆ? ಯಾವಾಗ ಯೋಜನೆ ಪ್ರಾರಂಭ ಮಾಡುತ್ತಾರೆ? ಇದರ ಬಗ್ಗೆ ಅವರು ಸ್ಪಷ್ಟವಾಗಿ ಉತ್ತರ ಕೊಡಬೇಕು.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರು ಕೇಳಿರತಕ್ಕಂತಹ ಪ್ರಶ್ನೆ ಕುಮಟಾ ಮತ್ತು ಹೊನ್ನಾವರ ಹಾಗೂ ಗೋಕರ್ಣ ಪಟ್ಟಣಗಳ ಬಗ್ಗೆ ಕೇಳಿದ್ದಾರೆ. ಗೋಕರ್ಣದಲ್ಲಿ ಪಟ್ಟಣ ಪಂಚಾಯಿತಿ ಇಲ್ಲ, ಗ್ರಾಮ ಪಂಚಾಯಿತಿ ಹೆಡ್‌ಕ್ವಾರ್ಟರ್ಸ್ ಇರುವುದರಿಂದ ನಮ್ಮ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ. ವಿಶೇಷವಾಗಿ ಕುಮಟಾ ಮತ್ತು ಹೊನ್ನಾವರ ಪಟ್ಟಣಗಳಿಗೆ ಈಗಾಗಲೇ ಸುಮಾರು 10 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿ ಈ ಎರಡು ಪಟ್ಟಣಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದೇವೆ. ಅವರ ಜನಸಂಖ್ಯೆಗೆ ಅನುಗುಣವಾಗಿ ಸುಮಾರು 20-25 ವರ್ಷಗಳ ಕಾಲ ಆಗುವಷ್ಟು ಕುಡಿಯುವ ನೀರಿನ ವ್ಯವಸ್ಥೆಯನ್ನು ಕೂಡ ಸರ್ಕಾರ ಈಗಾಗಲೇ ಮಾಡಿದೆ. ಅದರ ಜೊತೆಗೆ ಸನ್ಮಾನ್ಯ ಸದಸ್ಯರು ನೈರ್ಮಲ್ಯದ ದೃಷ್ಟಿಯಿಂದ ಯುಜಿಡಿ ವರ್ಕ್ ಆಗಬೇಕೆಂದು ಕೇಳುತ್ತಿದ್ದಾರೆ. ಸರ್ವೇ ಮಾಡುವುದಕ್ಕೆ ಕೂಡ ನಾನು ಆದೇಶ

ಕೊಡುತ್ತೇನೆ. ಸರ್ವೇ ಬಂದ ಮೇಲೆ ಸರ್ಕಾರ ಮಂಜೂರಾತಿಗೆ ಪರಿಶೀಲನೆ ಮಾಡುತ್ತದೆ.

ಶ್ರೀ ಮೋಹನ್ ಕೆ.ಶೆಟ್ಟಿ: ನಾವು ಒಳಚರಂಡಿ ವ್ಯವಸ್ಥೆ ಬಗ್ಗೆ ಕೇಳಿದರೆ, ಕುಡಿಯುವ ನೀರಿನ ಬಗ್ಗೆ ಅವರು ಹೇಳುತ್ತಿದ್ದಾರೆ. ಅದೂ ಕೂಡ ಸುಳ್ಳು ಹೇಳುತ್ತಿದ್ದಾರೆ. ನಾಲ್ಕು ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ, ಅದರಲ್ಲಿ ಎಲ್ಲಾ ಖರ್ಚಾಗಿದೆ, ಇದರಲ್ಲಿ ಪುರಸಭೆ ಪಾಲೂ ಕೂಡ ಇದೆ. ಆದರೂ ನೀರಿನ ಯೋಜನೆ ಇನ್ನೂ ಸಮರ್ಪಕವಾಗಿ ಆಗಿಲ್ಲ. ಏಕೆಂದರೆ, ಹಿಂದೆ ನಮ್ಮಲ್ಲಿ ಬೋರ್‌ವೆಲ್ ಸಿಸ್ಟಮ್ ಇತ್ತು, ಈಗ ಹೊಸ ಸಿಸ್ಟಮ್ ಬಂದಿರುವುದರಿಂದ ಅದಕ್ಕೆ ತಕ್ಕ ಡಿಸ್ಟ್ರಿಬ್ಯೂಷನ್ ಮಾಡಿಲ್ಲ, ಅದಕ್ಕೆ ತಕ್ಕ ಟ್ಯಾಂಕ್ ಮಾಡಿಲ್ಲ, ಪಂಪ್ ಮಾಡಿಲ್ಲ, ಅದನ್ನೂ ಕೂಡ ಮಾಡಿಕೊಡಬೇಕು. ಯಾವಾಗ ಈ ಯೋಜನೆ ಜಾರಿಗೆ ತರುತ್ತೀರೆಂದು ಹೇಳಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ಮಾನ್ಯ ಅಧ್ಯಕ್ಷರೆ, ನಾನು ಎರಡು ಪಟ್ಟಣಗಳನ್ನು ಸೇರಿಸಿ 10 ಕೋಟಿ ರೂಪಾಯಿಗಳು ಖರ್ಚಾಗಿದೆ ಎಂದು ಹೇಳಿದೆ. ಹೊನ್ನಾವರದಲ್ಲಿ ಸುಮಾರು 10 ಕೋಟಿ ರೂಪಾಯಿಗಳು, ಕುಮಟಾದಲ್ಲಿ ಸುಮಾರು ಮೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಯುಜಿಡಿ ಆದಷ್ಟು ಬೇಗ ಇದನ್ನು ಸರ್ವೇ ಮಾಡಿ ತರಿಸಿದ ಮೇಲೆ ಮಂಜೂರಾತಿ ಕೊಡತಕ್ಕಂತಹ ಕೆಲಸ ಮಾಡುತ್ತೇವೆ.

ಕಾರಂಜಾ ಅಣೆಕಟ್ಟು ಯೋಜನೆಯಲ್ಲಿ ಖಾಲಿ ಇರುವ ಹುದ್ದೆಗಳು.

343(3462)

ಶ್ರೀ ಸುಭಾಷ್ ಕಲ್ಲೂರ್(ಹುಮ್ನಾಬಾದ್): ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾರಂಜಾ ಅಣೆಕಟ್ಟು ಯೋಜನೆಯ ಕಾಮಗಾರಿಗಳಿಗಾಗಿ ನಿರ್ವಹಿಸಲು ಮಂಜೂರಾಗಿರುವ ವಿವಿಧ ಹಂತದ ಇಂಜಿನಿಯರ್‌ಗಳ ಸಂಖ್ಯೆ ಎಷ್ಟು?

ಆ) ಎಲ್ಲ ಹಂತದ ಇಂಜಿನಿಯರ್‌ಗಳ ಹಾಲಿ ಇರುವ ಸಂಖ್ಯೆ ಎಷ್ಟು? ದರ್ಜೆವಾರು ವಿವರ ನೀಡಿ?

ಇ) ಸದರಿ ಹುದ್ದೆಗಳಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು? ಇವು ಯಾವಾಗಿನಿಂದ